# ತರಗತಿಯ ಚಟುವಟಿಕೆಗಳು

ರಜನಿ ದ್ವಿವೇದಿ ಮತ್ತು ಸುನೀತಾ ಮಿಶ್ರಾ

**ಚಟುವಟಿಕೆ 1: ಸಂದರ್ಭಕ್ಕೆ ಅನುಸಾರವಾಗಿ ಪದಗಳ ಬಳಕೆ**

**ಉದ್ದೇಶಗಳು**

1. ನಾಮಪದ, ವಿಶೇಷಣ ಹಾಗೂ ಕ್ರಿಯಾಪದಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು
2. ಪದಗಳನ್ನು ಬಳಸುವ ರೀತಿಯು ಅದರ ಅರ್ಥವನ್ನು ನಿರ್ಧರಿಸುತ್ತದೆ ಎಂಬುದನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಲು ಸಹಾಯಮಾಡುವುದು

**ಮಟ್ಟ**

ಹಿರಿಯ ಪ್ರಾಥಮಿಕ ತರಗತಿಗಳು

**ಪರಿಕರ**

ಮಕ್ಕಳ ಶೈಕ್ಷಣಿಕ ಮಟ್ಟ ಹಾಗೂ ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಪಠ್ಯವನ್ನು ಆರಿಸಿಟ್ಟುಕೊಳ್ಳುವುದು. ಮೇಲಿಂದ ಮೇಲೆ ನಾಮಪದ, ವಿಶೇಷಣ ಹಾಗೂ ಕ್ರಿಯಾಪದಗಳು ಬಳಸಲ್ಪಡುವ ಪಠ್ಯವಾದರೆ ಒಳ್ಳೆಯದು. ಇಲ್ಲಿ ಆರಿಸಿರುವ ಪಠ್ಯಭಾಗವು ರುಡ್‌ಯಾರ್ಡ್ ಕಿಪ್ಲಿಂಗ್ (Rudyard Kipling)ರವರ *The Jungle book (ದಿ ಜಂಗಲ್ ಬುಕ್)* ಪುಸ್ತಕದ ಮೊದಲ ಅಧ್ಯಾಯ. (ಇದನ್ನು ಈ ಚಟುವಟಿಕೆಯ ಕೊನೆಯಲ್ಲಿ ಕೊಡಲಾಗಿದೆ).

ಕಪ್ಪುಹಲಗೆ, ಸೀಮೆಸುಣ್ಣ, ಬರೆಯಲು ಪುಸ್ತಕಗಳು ಹಾಗೂ ಪೆನ್ಸಿಲ್ಲುಗಳು

**ತಯಾರಿ**

ಸೂಕ್ತ ಪಠ್ಯವೊಂದನ್ನು ಆರಿಸಿಕೊಳ್ಳಬೇಕು. ಆ ಪಠ್ಯದಲ್ಲಿ ಬರುವ ಪದಗಳ ಬಗೆಗಳನ್ನು ಗುರುತಿಸಬೇಕು (ನಾಮಪದಗಳು, ವಿಶೇಷಣಗಳು, ಮತ್ತು ಕ್ರಿಯಾಪದಗಳು). ಅಗತ್ಯ ಬಿದ್ದರೆ ಮಕ್ಕಳಿಗೆ ಉದಾಹರಣೆ ನೀಡಲು ಅಂಥ ಪದಗಳ ಇನ್ನೂ ಹೆಚ್ಚು ಬಗೆಗಳನ್ನು ಯೋಚಿಸಿಟ್ಟುಕೊಳ್ಳಬೇಕು.

**ಕಾರ್ಯವಿಧಾನ**

ಈ ಚಟುವಟಿಕೆಯನ್ನು ಮಾಡುವ ಮೊದಲು ಮಕ್ಕಳು ಆ ಕಥೆ/ ಅಧ್ಯಾಯ /ಪಠ್ಯವನ್ನು ಒಂದು ಬಾರಿಯಾದರೂ ಓದಿರಬೇಕು. ಮಕ್ಕಳಿಗೆ ಮೂರರಿಂದ ನಾಲ್ಕು ಜನವಿರುವಂತೆ ಗುಂಪಾಗಿ ಕುಳಿತುಕೊಳ್ಳಲು ಸೂಚಿಸಬೇಕು.

ಮಕ್ಕಳು ಪ್ಯಾರವನ್ನು ಓದಿ ಚರ್ಚಿಸಲು ಅನುಕೂಲವಾಗುವಂತೆ ಪ್ರತೀ ಗುಂಪೂ ತೀರಾ ದೊಡ್ಡದಾಗಿ ಇರದಂತೆ ನೋಡಿಕೊಳ್ಳಬೇಕು. ಮತ್ತೊಂದು ಬಾರಿ ಆಯ್ಕೆ ಮಾಡಿದ ಪ್ಯಾರವನ್ನು ಓದಲು ಸೂಚಿಸಬೇಕು.

ಒಮ್ಮೆ ಅವರೆಲ್ಲರದ್ದೂ ಓದಿಯಾದ ಮೇಲೆ, ಅದರಲ್ಲಿ ಬರುವ ನಾಮಪದಗಳು, ವಿಶೇಷಣಗಳು ಹಾಗೂ ಕ್ರಿಯಾಪದಗಳನ್ನು ಗುರುತಿಸಲು ಹೇಳಬೇಕು. ಅವರ ಸಹಾಯಕ್ಕಾಗಿ, ಪದಗಳು ಒಂದೊಮ್ಮೆ ಕೇವಲ ಒಬ್ಬ ವ್ಯಕ್ತಿ, ಒಂದು ಪ್ರಾಣಿ, ಜಾಗ, ವಸ್ತು ಅಥವಾ ಘಟನೆಯನ್ನು ಸೂಚಿಸುವಂತಿದ್ದರೆ ಅವು ಏಕವಚನ ನಾಮಪದಗಳೆಂದೂ, ಇಲ್ಲಾ ಆ ಪದಗಳು ಒಂದಕ್ಕಿಂತ ಹೆಚ್ಚು ವ್ಯಕ್ತಿ, ಪ್ರಾಣಿ, ಜಾಗ ಅಥವಾ ವಸ್ತುವನ್ನು ಸೂಚಿಸುವಂತಿದ್ದರೆ ಅವು ಬಹುವಚನ ನಾಮಪದಗಳೆಂದು ಸೂಚಿಸಬಹುದು. ವಿಶದವಾಗಿ ಹೇಳಬೇಕೆಂದರೆ ನಾಮಪದಗಳನ್ನು ಯಾವಾಗಲೂ ಬಹುವಚನಕ್ಕೆ ಪರಿವರ್ತಿಸಬಹುದು. ಅಲ್ಲದೆ, ವಿಶೇಷಣಗಳ ನಂತರ ನಾಮಪದಗಳು ಬರುತ್ತವೆ. ಉದಾಹರಣೆಗೆ, ಪಠ್ಯಭಾಗದಲ್ಲಿ ಬರುವ *"ಬಾಲ (tail)" ಮತ್ತು "ನೆರಳು (shadow)"* ಎಂಬ ಪದಗಳು ನಾಮಪದಗಳು, ಏಕಂದರೆ ಮೊದಲನೆಯದಾಗಿ ಅವುಗಳನ್ನು ಬಹುವಚನಕ್ಕೆ ಬದಲಿಸಬಹುದು ಹಾಗೂ ಅವು *"ಪೊದೆಯಂಥ (bushy)" ಮತ್ತು "ಪುಟ್ಟ (little)"* ಎಂಬ ವಿಶೇಷಣಗಳ ನಂತರ ಅನುಕ್ರಮವಾಗಿ ಇವೆ. ನಾಮಪದಗಳನ್ನು ವರ್ಣಿಸುವ ಪದಗಳೇ ವಿಶೇಷಣಗಳು ಹಾಗೂ ಕ್ರಿಯೆಯನ್ನು ಸೂಚಿಸುವ ಪದಗಳು ಕ್ರಿಯಾಪದಗಳು, ಉದಾಹರಣೆಗೆ *"ಕೆರೆಯಿತು (scratched)", "ಆಕಳಿಸಿತು (yawned)".* ಮತ್ತು "ಇತ್ತು(-ed)" ಮತ್ತು "ಇರುವ (-ing)" ಎಂಬ ರೀತಿಯ ಜೋಡಣೆಯಿಂದ ಕೊನೆಯಾಗುವುದು ಕೇವಲ ಕ್ರಿಯಾಪದಗಳು ಮಾತ್ರ, ಆದರೆ ಈ ರೀತಿ ಅಂತ್ಯವಾಗುವ ಕ್ರಿಯಾಪದಗಳನ್ನು ಅನೇಕವೇಳೆ ವಿಶೇಷಣವಾಗಿಯೂ ಬಳಸಬಹುದು. ಈ ಅಂಶಗಳನ್ನು ಕಪ್ಪು ಹಲಗೆಯ ಮೇಲೆ ಬರೆದರೆ ಒಳಿತು.

ಹಲಗೆಯ ಮೇಲೆ ಒಂದು ಕೋಷ್ಟಕವನ್ನು ಬರೆದು, ಮಕ್ಕಳಿಗೆ ತಮ್ಮ ಬರೆಯುವ ಪುಸ್ತಕದಲ್ಲಿ ಅಂಥದ್ದೇ ಕೊಷ್ಟಕವನ್ನು ನಕಲು ಮಾಡಲು ಹೇಳಬೇಕು. ನಂತರ ಹಲಗೆಯ ಮೇಲೆ ಬರೆದ ಅಂಶಗಳನ್ನು ಮನದಲ್ಲಿಟ್ಟುಕೊಂಡು ಆ ಪದಗಳನ್ನು ಈ ಬೇರೆ ಬೇರೆ ಪ್ರವರ್ಗಗಳಡಿ ಬರೆಯಲು ತಿಳಿಸಬೇಕು.

| **ವಿಶೇಷಣ** | **ನಾಮಪದ** | **ಕ್ರಿಯಾಪದ** |
|---|---|---|
| ಪೊದೆಯಂಥ | ಬಾಲ | ಕೆರೆಯಿತು |
| .......... | .......... | .......... |

ಚರ್ಚಿಸಿ ತಮ್ಮ ಪಟ್ಟಿಯನ್ನು ಮುಗಿಸಲು ಮಕ್ಕಳ ಎಲ್ಲಾ ಗುಂಪುಗಳಿಗೂ ಸಮಯಾವಕಾಶವನ್ನು ಕೊಡಬೇಕು. ಎಲ್ಲ ಪದಗಳನ್ನೂ ಪಟ್ಟಿ ಮಾಡಿಯಾದ ಮೇಲೆ ಅದರಲ್ಲಿರುವ ವಿಶೇಷಣಗಳನ್ನು ಹೊಸ ನಾಮಪದಗಳೊಂದಿಗೆ ಬಳಸಲು ಹೇಳಬೇಕು. ಹೊಸ ನಾಮಪದಗಳು ಕೊಟ್ಟಿರುವ ಪ್ಯಾರದಲ್ಲೆಲ್ಲೂ ಇರಬಾರದು. ಉದಾಹರಣೆಗೆ, *"ಬೆಚ್ಚಗಿನ ಬೆಳಗು", "ಬೆಚ್ಚಗಿನ ಹೊದಿಕೆ"*, ಇತ್ಯಾದಿ. ಇದೇ ರೀತಿ ಅವರು ಪಟ್ಟಿಯಲ್ಲಿರುವ ಬೇರೆ ವಿಶೇಷಣಗಳ ಜತೆಗೂ ಹೊಸ ನಾಮಪದಗಳನ್ನು ಸೇರಿಸಬಹುದು. ಮತ್ತು ಪಟ್ಟಿಯಲ್ಲಿರುವ ಅಷ್ಟೂ ವಿಶೇಷಣಗಳನ್ನು ಅದರಲ್ಲಿರುವ ಎಲ್ಲಾ

ನಾಮಪದಗಳೊಂದಿಗೂ ಸೇರಿಸಲು ತಿಳಿಸಬೇಕು. ಅವರ ಸಹಾಯಕ್ಕಾಗಿ "ಥಂಡಿ ಸಂಜೆ", “ತಂಗಾಳಿಯ ಸಂಜೆ", ಈ ಥರದ ಉದಾಹರಣೆಗಳನ್ನು ಕೊಡಬಹುದು.

ಪ್ಯಾರದಲ್ಲಿ ಕ್ರಿಯಾಪದಗಳಂತೆ ಕಂಡುಬರುವ, ಆದರೆ ವಿಶೇಷಣಗಳ ಕಾರ್ಯವನ್ನು ಮಾಡುವ ಪದಗಳಿರಬಹುದು ಎಂಬುದರ ಬಗ್ಗೆ ಮಕ್ಕಳ ಗಮನ ಸೆಳೆಯಿರಿ. ಅವರಿಗೆ ಯೋಚಿಸಲು ಮತ್ತು ಸ್ಪಂದಿಸಲು ಸಮಯಾವಕಾಶ ನೀಡಿ. ಅವರಿಗೆ ಕೊಡುವ ಉದಾಹರಣೆಗಳಲ್ಲಿ ಇಂಥ ಪದಗಳನ್ನೂ ಸೇರಿಸಬಹುದು:

1. a) ನನಗೆ ಕೊಂಚ **ನಿದ್ರೆ** ಬೇಕು. "ನಿದ್ರೆ" ಇಲ್ಲಿ ನಾಮಪದವಾಗುತ್ತದೆ
   b) ನಾನು ಇಡೀ ದಿನ **ನಿದ್ರಿಸಬಲ್ಲೆ**. "ನಿದ್ರೆ" ಇಲ್ಲಿ ಕ್ರಿಯಾಪದವಾಗುತ್ತದೆ
   c) **ನಿದ್ರೆಗುಳಿ** ನಾಯಿ. "ನಿದ್ರೆ" ಇಲ್ಲಿ ವಿಶೇಷಣವಾಗುತ್ತದೆ

2. a) ನೀನು ಆ **ಜಗಳವನ್ನು** ನೋಡಿದೆಯಾ?
   b) ಅವಳೊಡನೆ **ಜಗಳಾಡಬೇಡ.**
   c) ಆ **ಜಗಳಗಂಟ** ಕೋಣವನ್ನು ನೀನು ನೋಡಿದೆಯಾ?

3. a) ಬೇರೆಯವರ ಎದುರಿಗೆ **ಕೆರೆದುಕೊಳ್ಳುವುದು** ಸಭ್ಯ ನಡತೆಯಲ್ಲ.
   b) ಅವನು ತಲೆ **ಕೆರೆದುಕೊಂಡನು.**
   c) ಈಗಾಗಲೇ **ಕೆರೆದ (ಗೀರಿದ)** ಗಾಜಿನ ಫಲಕ ಒಡೆದುಹೋಯಿತು.

ಈಗ ಮಕ್ಕಳಿಗೆ ತಾವು ಮಾಡಿದ ಪಟ್ಟಿಯನ್ನು ಮತ್ತೊಮ್ಮೆ ಗಮನಿಸಿ ಅದರಲ್ಲಿರುವ ಪದಗಳನ್ನು ಬಳಸಿ ಒಂದೇ ಪದ ಬೇರೆ ಬೇರೆ ವಾಕ್ಯಗಳಲ್ಲಿ ನಾಮಪದವಾಗಿಯೂ, ಕ್ರಿಯಾಪದವಾಗಿಯೂ ಹಾಗೂ ವಿಶೇಷಣವಾಗಿಯೂ ಕಂಡುಬರುವಂತೆ ರಚಿಸಲು ಹೇಳಬೇಕು. ಮಕ್ಕಳು ಈ ಚಟುವಟಿಕೆಯನ್ನು ತಮ್ಮ ತಮ್ಮ ಗುಂಪಿನಲ್ಲಿ ಮಾಡಿ ಮುಗಿಸಿದ ಮೇಲೆ, ಪ್ರತೀ ಗುಂಪಿನವರಿಗೂ ತಾವು ರಚಿಸಿದ ಕೆಲವು ವಾಕ್ಯಗಳನ್ನು ಮಂಡಿಸಿ ಕಪ್ಪುಹಲಗೆಯ ಮೇಲೆ ಬರೆಯಲು ಹೇಳಬೇಕು. ಆ ವಾಕ್ಯಗಳನ್ನು ರಚಿಸಲು ಅವರು ಅನುಸರಿಸಿದ ಪ್ರಕ್ರಿಯೆಯನ್ನು ಉಳಿದವರೊಂದಿಗೆ ಹಂಚಿಕೊಳ್ಳಲು ಕೇಳಬಹುದು. ಅವರ ವರದಿಯಲ್ಲಿ ಯಾವುದಾದರು ವಿಶೇಷ ಅಂಶಗಳಿದ್ದಲ್ಲಿ ಅದನ್ನು ಎತ್ತಿ ತೋರಿಸಬೇಕು. ಉದಾಹರಣೆಗೆ, ಈ ಚಟುವಟಿಕೆಗೂ ಮುನ್ನ ಅವರ ಯೋಚನೆ ಹೇಗಿತ್ತು, ಮತ್ತು ಈ ಚಟುವಟಿಕೆಯನ್ನು ಮಾಡುತ್ತಿರಬೇಕಾದರೆ ಅವರಿಗೆ ಏನು ಅರ್ಥವಾಯಿತು ಇತ್ಯಾದಿ. ಈ ಪ್ರವರ್ಗಗಳ ಪದಗಳು ಕಟ್ಟುನಿಟ್ಟಾಗಿ ಅಥವಾ ನಿಶ್ಚಿತವಾಗಿ ಒಂದೇ ರೀತಿ ಇರಬೇಕೆಂದಲ್ಲವೆಂಬ ಅಂಶವನ್ನು ಒತ್ತಿ ಹೇಳಬೇಕು. ಅವು ಒಂದು ಪ್ರವರ್ಗದಿಂದ ಇನ್ನೊಂದು ಪ್ರವರ್ಗಕ್ಕೆ ಬದಲಾಗಬಹುದು. ಹಾಗೆ ಬದಲಾದಾಗ ಕೆಲವೊಮ್ಮೆ ಆ ಪದಗಳು ತಮ್ಮ ಮೂಲರೂಪವನ್ನು ಹಾಗೆಯೇ ಉಳಿಸಿಕೊಳ್ಳಬಹುದು, ಅಥವಾ ಮೇಲಿನ ಉದಾಹರಣೆಯಲ್ಲಿ ನೋಡಿದಂತೆ ಸ್ವರೂಪದಲ್ಲಿ ಕೆಲವು ಸಣ್ಣಪುಟ್ಟ ಬದಲಾವಣೆಗಳು ಆಗಬಹುದು. ಒಂದು ಪದ ಒಂದು ಪಠ್ಯದಲ್ಲಿ ಹೇಗೆ ವ್ಯವಹರಿಸುತ್ತದೆ ಎಂಬುದು ಆ ವಾಕ್ಯದ ಸಂದರ್ಭದ ಮೇಲೆ ಅವಲಂಬಿತವಾಗಿರುತ್ತದೆ.

ತಂದೆ ತೋಳವು ತನ್ನ ದಿನದ ವಿಶ್ರಾಂತಿಯಿಂದ ಎದ್ದು, ಮೈ ಕೆರೆದುಕೊಂಡು, ಆಕಳಿಸಿ, ಬೆರಳ ತುದಿಗಳಿಂದ ನಿದ್ದೆಯ ಮಂಪರು ಹೋಗುವಂತೆ ತನ್ನ ಪಂಜವನ್ನು ಅಗಲವಾಗಿ ಹರಡುತ್ತಿರುವಾಗ ಸಿಯೋನೀ ಬೆಟ್ಟಗಳಲ್ಲಿ ಬಹಳ ಬೆಚ್ಚಗಿನ ಸಂಜೆಯ ಏಳು ಗಂಟೆಯಾಗಿತ್ತು.

ತಾಯಿ ತೋಳವು ತನ್ನ ದೊಡ್ಡ ಬೂದು ಬಣ್ಣದ ಮೂಗನ್ನು ತನ್ನ ನಾಲ್ಕು ಉರುಳಾಡುತ್ತಿರುವ, ಕಿರಲುವ ಮರಿಗಳ ಮೇಲೆ ಅಡ್ಡಲಾಗಿ ಇರಿಸಿತ್ತು. ಅವರು ವಾಸಿಸುತ್ತಿದ್ದ ಗುಹೆಯ ಬಾಯಿಯೊಳಗೆ ಚಂದ್ರನ ಹೊಳೆಯುವ ಬೆಳಕು ತೂರಿ ಬರುತ್ತಾ ಇತ್ತು. "ಆರ್ರ್" ಎಂದ ತಂದೆ ತೋಳ "ಮತ್ತೆ ಬೇಟೆಗೆ ಹೊರಡುವ ಸಮಯವಾಯಿತು" ಎಂದಿತು. ಅದು ಇನ್ನೇನು ಬೆಟ್ಟದ ಇಳಜಾರಿನಲ್ಲಿ ಜಿಗಿದು ಹೋಗಬೇಕು, ಆವಾಗ ಪೊದೆಬಾಲದ ಸಣ್ಣ ನೆರಳೊಂದು ಹೊಸಿಲನ್ನು ದಾಟಿ, "ಅದೃಷ್ಟ ಸದಾ ನಿನ್ನ ಜೊತೆಗಿರಲಿ, ಓ, ತೋಳಗಳ ಯಜಮಾನನೇ; ಮತ್ತು ಒಳ್ಳೆಯ ಅದೃಷ್ಟ ಮತ್ತು ಗಟ್ಟಿಯಾದ ಬಿಳಿ ಹಲ್ಲುಗಳು ಸದಾ ನಮ್ಮ ಉದಾತ್ತ ಮಕ್ಕಳನ್ನು ಕಾಪಾಡಲಿ, ಅವರು ಈ ಜಗತ್ತನಲ್ಲಿ ಇರುವ ಹಸಿದವರನ್ನು ಎಂದೂ ಮರೆಯದೇ ಇರಲಿ" ಎಂದು ಒರಲಿತು.

**ದ ಜಂಗಲ್ ಬುಕ್**


**References**

Agnihotri, R. K. & Khanna, A. L. (1996). *English Grammar in Context*. Delhi: Ratna Sagar.

Kipling, R. (2013). *The Jungle Book.* Scholastic. (First published 1894, London, UK): Batra Art Press, New Delhi.



**ರಜನಿ ದ್ವಿವೇದಿ** ಅವರು ಭಾಷೆ ಹಾಗೂ ಭಾಷಾ ಬೋಧನೆಯಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ. ಪ್ರಸ್ತುತ ಅವರು ಉದಯಪುರದ ವಿದ್ಯಾ ಭವನ ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

*rajni@vidyabhawan.org*


**ಚಟುವಟಿಕೆ 2: ಒಂದು ಕಥೆ, ಹಲವು ಕೌಶಲ್ಯಗಳು**

**ಕಥೆಗಳ ಮೂಲಕ ಸಮಗ್ರ ಭಾಷಾ ಬೆಳವಣಿಗೆ: ಕೆಲವು ಮುಖ್ಯ ಅವಲೋಕನಗಳು**

1. ಕಥೆಗಳಿಗೆ ಯಾವುದೇ ಭಾಷೆಯ ಬೆಳವಣಿಗೆಗೆ ಮೂಲಾಧಾರವಾದಂಥ - ಓದುಗರ ಆಸಕ್ತಿಯನ್ನು ಹಿಡಿದಿಟ್ಟುಕೊಳ್ಳುವ, ಅವರ ಕಲ್ಪನಾಶಕ್ತಿಯನ್ನು ಉದ್ದೀಪಿಸುವ ಹಾಗೂ ಲೋಕದ ಸಾಮಾಜಿಕ-ಸಾಂಸ್ಕೃತಿಕ ಹಾಗೂ ಐತಿಹಾಸಿಕ ಅಂಶಗಳನ್ನು ಒಳಗೊಳ್ಳುವ ಸಾಧ್ಯತೆ ಇದೆ.
2. ಭಾಷಾ ಕೌಶಲ್ಯವನ್ನು ಬೆಳೆಸಲು ಅವು ಬಹಳ ಬಲವಾದ ಇಂಬನ್ನು ಕೊಡುತ್ತವೆ.
3. ಕಥೆಗಳಿಗೆ ಭಾಷೆಯೊಂದಿಗೆ ಇತರ ಜ್ಞಾನಕ್ಷೇತ್ರಗಳನ್ನು ಸೇರಿಸಿ ಪೂರ್ಣವನ್ನಾಗಿ ಮಾಡಲು ಸಾಧ್ಯವಾಗುತ್ತದೆ.
4. ನಮ್ಮ ಸಮಾಜ ಹಾಗೂ ತರಗತಿಗಳಲ್ಲಿ ಕಂಡುಬರುವ ಬಹುಭಾಷಾ ಪರಿಸರಕ್ಕೆ ಅನುಗುಣವಾಗಿ ಸ್ಪಂದಿಸಲು ಕಥೆಗಳು ಒಳ್ಳೆಯ ಸಂದರ್ಭವನ್ನು ಒದಗಿಸುತ್ತವೆ.

**ಮಟ್ಟ**

ಎರಡರಿಂದ ಮೂರನೇ ತರಗತಿ (ಓದು ಬರಹಕ್ಕೆ ಆಗಷ್ಟೇ ತೆರೆದುಕೊಂಡಿರುವ ಪ್ರಾಥಮಿಕ ಶಾಲೆಯ ಮಕ್ಕಳು)

**ಪರಿಕರ**

ಸರಳವಾದ ಕಥಾ ರಚನೆಯುಳ್ಳ (ಕಥಾ-ವಾಕ್ಯರಚನೆ) ಹಾಗೂ ಪರಿಚಿತ ಪಾತ್ರಗಳುಳ್ಳ (ಉದಾ: *"Billi ke Bachhe (ಬಿಲ್ಲಿ ಕೆ ಬಚ್ಚೆ)"* ಅಥವಾ *"Three little pigs (ಥ್ರೀ ಲಿಟಲ್ ಪಿಗ್ಸ್)"),* ಒಂದು ಕಪ್ಪು ಹಲಗೆ ಅಥವಾ ದೊಡ್ಡ ಚಾರ್ಟ್ ಪೇಪರ್ ಮತ್ತು ಖಾಲಿ ಹಾಳೆಗಳು.

**ಉದ್ದೇಶಗಳು**

1. ಭಾಷಿಕ ಸಂರಚನೆಯ ಬೇರೆ ಬೇರೆ ಸ್ತರಗಳಾದ ಪದಗಳು, ಅಕ್ಷರಗಳು ಹಾಗೂ ವಾಕ್ಯಗಳನ್ನು ಗುರುತಿಸುವ ಸಾಮರ್ಥ್ಯವನ್ನು ಹೊಂದುವುದು;
2. ಕಥಾ-ವಾಕ್ಯರಚನೆ ಹಾಗೂ ಘಟನಾವಳಿಗಳ ಅನುಕ್ರಮದ ಒಂದು ಮೂರ್ತ ಕಲ್ಪನೆಯನ್ನು ಹೊಂದುವುದು;
3. ಸಾರಾಂಶೀಕರಿಸುವ ಕೌಶಲ್ಯಗಳು;
4. ಕಲ್ಪನಾಶೀಲ ಯೋಚನೆಗಳಿಗೆ ಅವಕಾಶ ಮಾಡಿಕೊಡುವುದು.

**ಕಾರ್ಯ 1**

1. ಕಥೆ ಹೇಳಿಯಾದ ಮೇಲೆ ಶಿಕ್ಷಕರು ಮಕ್ಕಳಿಗೆ ಸಾಮೂಹಿಕವಾಗಿ ಕಥೆಯನ್ನು ಮತ್ತೊಮ್ಮೆ ಹೇಳಲು ಸೂಚಿಸಿ, ಅವರಿಗೆ ಅನುಕೂಲವಾಗಲೆಂದು ಕಪ್ಪು ಹಲಗೆ ಅಥವಾ ದೊಡ್ಡ ಚಾರ್ಟ್ ಪೇಪರ್ ಮೇಲೆ ಇಡೀ ಕಥೆಯನ್ನು ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಬರೆಯಬೇಕು.

2. ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ಅವರಿಗೆ ಸಣ್ಣ ಖಾಲಿ ಹಾಳೆಗಳನ್ನು ಕೊಡುವುದು.
3. ಪ್ರತೀ ಗುಂಪಿಗೂ ಒಂದು ಅಕ್ಷರವನ್ನು (ಅಥವಾ ಅಕ್ಷರಗಳ ಒಂದು ಸಮುಚ್ಛಯವನ್ನು) ಕೊಟ್ಟು ಆ ಅಕ್ಷರದಿಂದ ಶುರುವಾಗುವ/ಕೊನೆಯಾಗುವ ಪ್ರತೀ ಪದವನ್ನು ಪಟ್ಟಿ ಮಾಡಲು ಹೇಳಬೇಕು. ಉದಾಹರಣೆಗೆ, ಹಿಂದಿಯ *"ನೆ (''ne'')"* ಎಂಬ ಅಕ್ಷರವನ್ನು ತೆಗೆದುಕೊಂಡರೆ ಅದನ್ನು ಸ್ವತಂತ್ರವಾಗಿ ಉಚ್ಚರಿಸಿದಾಗ ಹೊರಡುವ ಧ್ವನಿಯ ಭೇದವನ್ನು ಗುರುತಿಸಬೇಕಾಗುತ್ತದೆ (ಈ ಉದಾಹರಣೆಯಲ್ಲಿ *"ನ್ (''n'' )"*).

**ಕಾರ್ಯ 2**

1. ಶಿಕ್ಷಕರು ಹೇಳಿದ ಪದಗುಚ್ಛಗಳನ್ನು ಕಪ್ಪುಹಲಗೆಯ ಮೇಲೆ ಬರೆದ ವಾಕ್ಯಗಳಲ್ಲಿ ಕಂಡುಹಿಡಿಯಲು ಮಕ್ಕಳಿಗೆ ಹೇಳಬೇಕು. ಉದಾಹರಣೆಗೆ, ಶಿಕ್ಷಕರು "ಮೂರು ಪುಟ್ಟ ಕಪ್ಪು ಬೆಕ್ಕಿನ ಮರಿಗಳು ಪೈಪಿನೊಳಗಿಂದ ಹೊರಬಂದವು" ಎಂಬ ವಾಕ್ಯದಲ್ಲಿ "ಪುಟ್ಟ ಬೆಕ್ಕಿನ ಮರಿಗಳು" ಅಥವಾ "ಪೈಪಿನೊಳಗಿಂದ" ಎಂಬ ಭಾಗವನ್ನು ಕಪ್ಪು ಹಲಗೆಯ ಮೇಲೆ ಕಂಡುಹಿಡಿಯಲು ಮಕ್ಕಳಿಗೆ ಹೇಳಬಹುದು.
2. ಕಲಿಕಾರ್ಥಿಗಳು ಆ ಪದಗುಚ್ಛಗಳನ್ನು ಕಂಡುಹಿಡಿಯಲು ಶಿಕ್ಷಕರು ಪದಗುಚ್ಛಗಳಲ್ಲಿ ಪದೇ ಪದೇ ಕಣ್ಣಿಗೆ ಬೀಳುವ ಪದಗಳನ್ನೂ ಒಳಗೊಂಡಂತೆ (sight words) ಅವು ಹೊಮ್ಮಿಸುವ ಧ್ವನಿ ಹಾಗೂ ಪದಗಳತ್ತ ಮಕ್ಕಳ ಗಮನ ಸೆಳೆಯುವ ಮೂಲಕ ಸಹಾಯ ಮಾಡಬಹುದು. ಈ ಪದಗುಚ್ಛಗಳನ್ನು ಮಕ್ಕಳು ತಮ್ಮ ಪುಸ್ತಕಗಳಲ್ಲಿ ಬರೆದಿಟ್ಟುಕೊಳ್ಳಬಹುದು ಹಾಗು ಅವನ್ನೇ ಶಿಕ್ಷಕರು ಕಪ್ಪು ಹಲಗೆಯ ಮೇಲೂ ಬರೆಯಬಹುದು.

(ಟಿಪ್ಪಣಿ: "ಪದಗುಚ್ಛಗಳು" ಎಂಬ ಪರಿಭಾಷೆ ಮಕ್ಕಳಿಗೆ ಗೊತ್ತಿದೆ ಎಂದು ಭಾವಿಸಲೂ ಆಗುವುದಿಲ್ಲ ಅಥವಾ ಶಿಕ್ಷಕರು ಆ ಪದವನ್ನು ಬಳಸಬೇಕೆಂದು ನಿರೀಕ್ಷಿಸಲೂ ಆಗುವುದಿಲ್ಲ. ಅವರು ಆಯಾ ಪದಗುಚ್ಛಗಳನ್ನು "ಅಭಿವ್ಯಕ್ತಿಸುತ್ತಾರೆ" ಅಷ್ಟೇ.)

**ವಿಸ್ತರಣೆಗಳು**

ಇದೊಂದು ತೆರೆದ ಅಂತ್ಯದ ಚಟುವಟಿಕೆಯಾದ್ದರಿಂದ ಇದನ್ನು ಹಲವಾರು ರೀತಿಯಲ್ಲಿ ವಿಸ್ತರಿಸಿಕೊಳ್ಳಬಹುದು, ಅವುಗಳಲ್ಲಿ ಕೆಲವು ಹೀಗಿವೆ:

a. ಪ್ರಶ್ನೆಗಳನ್ನು ಕೇಳುವ ಮೂಲಕ ಕಥೆಯ ಅಂತ್ಯ ಅಥವಾ ಅದರ ಇನ್ಯಾವುದಾದರೂ ಭಾಗವನ್ನು ಬದಲಾಯಿಸುಬಹುದು, ಉದಾ: ಒಂದು ವೇಳೆ ಬೆಕ್ಕಿನ ಮರಿಗಳು ಎಣ್ಣೆ ಡಬ್ಬಿಯಲ್ಲಿ ಬಿದ್ದುಬಿಟ್ಟಿದ್ದರೆ ಏನಾಗುತ್ತಿತ್ತು?

b. ಕಥೆಯ ಸಾರಾಂಶವನ್ನು ನಿಗದಿತ ವಾಕ್ಯಗಳಲ್ಲಿ ಹೇಳುವುದು;

c. ಒಂದಕ್ಕಿಂತ ಹೆಚ್ಚು ಬಾರಿ ಕಂಡುಬರುವ ಪದಗಳನ್ನು ಎಣಿಸುವುದು.

**ಚಿಂತನಾತ್ಮಕ ಪ್ರಶ್ನೆಗಳು:**

1. ಪ್ರಸ್ತುತ ಲೇಖನದ ಚಟುವಟಿಕೆಗಳು ಈಗಾಗಲೇ ಬರೆದ ಕಥೆಯ ಸುತ್ತ ಕೆಲಸ ಮಾಡುತ್ತವೆ. ಚಟುವಟಿಕೆಯ ಇದೇ ರಚನೆಯನ್ನಿಟ್ಟುಕೊಂಡು ಮಕ್ಕಳಿಗೇ ಸ್ವತಃ ಕಥೆಯನ್ನು ರಚಿಸಲು ಹೇಳಿದರೆ ಚಟುವಟಿಕೆಯ ಮೂಲ ಉದ್ದೇಶ ಸಫಲವಾಗುವುದೇ, ಚರ್ಚಿಸಿ.
2. ಶ್ರವಣದೋಷವುಳ್ಳ ಮಕ್ಕಳಿಗೋಸ್ಕರ ಇವೇ ಚಟುವಟಿಕೆಗಳನ್ನು ಹೇಗೆ ಮಾರ್ಪಾಟು ಮಾಡಬಹುದು ? ಯೋಚಿಸಿ ಉತ್ತರ ನೀಡಿ.
3. ವ್ಯಾಕರಣದ ಅಂಶಗಳಾದ ನಾಮಪದ, ಕ್ರಿಯಾಪದ ಹಾಗೂ ವಿಶೇಷಣಗಳನ್ನು ಅರ್ಥೈಸಲು ರಜನಿ ದ್ವಿವೇದಿ ಅವರ ಚಟುವಟಿಕೆ ಹೇಗೆ ಸಹಾಯಮಾಡುತ್ತದೆ? ಅದನ್ನು ಸಾಧ್ಯವಾಗಿಸುವುದರಲ್ಲಿ ಅವರ ಚಟುವಟಿಕೆಯಲ್ಲಿ ಮಿತಿಯೇನಾದರೂ ಕಂಡುಬರುತ್ತದೆಯೇ?

**ಸುನೀತಾ ಮಿಶ್ರಾ** ಅವರು ದೆಹಲಿ ವಿಶ್ವವಿದ್ಯಾಲಯದ ಗೃಹ ವಾಣಿಜ್ಯ ಸಂಸ್ಥೆಯ ಪ್ರಾಥಮಿಕ ಶಿಕ್ಷಣ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಕ್ಕಳ ಸಾಹಿತ್ಯ ಹಾಗೂ ಭಾಷೆ ಮತ್ತು ಯೋಚನೆಗಳ ಅಂತರಕ್ರಿಯೆ ಇವರ ಆಸಕ್ತಿಯ ವಿಷಯಗಳಾಗಿವೆ.
suneeta.m76@gmail.com

**ಅನುವಾದಕರು**: ಸ್ವಯಂಪ್ರಭಾ ಹೆಗ್ಡೆ/ **ಪರಿಶೀಲಕರು:** ಪ್ರಜ್ಞಾ
**ಮೂಲ:** *Language and Language Teaching*, Volume 6 Number 1 Issue 11 January 2017